ಕೊಟ್ಟ ಪಾಪಿ ಮುಂಡೇದು ಇದೇ' ಎಂದು ನಮಗ್ಯಾರು ಹೇಳಿದ್ದರೋ ನೆನಪಿಲ್ಲ. ಸಾಬರ ಕೇರಿಯ ಹುಡುಗರಾದ ನಾವೆಲ್ಲಾ ಈ ಮಾತನ್ನೇ ಒಂದು ದ್ವೇಷದ ದಂಧೆ ಮಾಡಿಕೊಂಡಿದ್ದೆವು.

ಓತಿಕ್ಯಾತವನ್ನು ಹೊಡೆದು ಸಾಯಿಸುವ ಮೊದಲು ಅದನ್ನು ಹಿಡಿದು ಆಟವಾಡಿಸುತ್ತಿದ್ದೆವು. ಕೆಂಪು ತಲೆಯ ಗಂಡು ಓತಿಕ್ಯಾತ ಕಂಡರೆ ಬಲು ಖುಷಿಯಾಗುತ್ತಿತ್ತು. ಬಲು ಅಹಂಕಾರದಲ್ಲಿ ಹೆದರದೆ ಕೂರುವ ಅದನ್ನು ಹಸಿ ತೆಂಗಿನಗರಿಯ ಕಡ್ಡಿ ಬಳಸಿ ಕೊಕ್ಕೆ ಗಂಟಿನಲ್ಲಿ ಕುತ್ತಿಗೆಗೆ ಫಾಸಿ ಹಾಕಿ ಹಿಡಿಯುತ್ತಿದ್ದೆವು. ಅದರ ಕುತ್ತಿಗೆಗೆ ತೆಂಗಿನ ಗರಿಯ ಸರಗಂಟಿನ ಕೊಕ್ಕೆ ತೊಡಿಸುವಾಗಲೂ ಆ ಪೆದ್ದು ಮುಂಡೆದು ಸುಮ್ಮನೆ ಪಿಳಿಪಿಳಿ ಕಣ್ಣು ತಿರುಗಿಸುತ್ತಾ ಕೂತಿರುತ್ತಿತ್ತು. ಕುತ್ತಿಗೆಗೆ ತೆಂಗಿನಗರಿಯ ಕಡ್ಡಿಗೆ ಸಿಕ್ಕು ಅದನ್ನು ಸೆಳೆದುಕೊಂಡ ಮೇಲೇ ಅದಕ್ಕೆ ತಾನು ಸೆರೆ ಸಿಕ್ಕ ವಿಷಯ ಗೊತ್ತಾಗುತ್ತಿತ್ತು. ಆಗ ವಿಲಿವಿಲಿ ಒದ್ದಾಡುವ ಅದನ್ನ ಹಿಡಿದು ಸಂಜೆಯ ತನಕ ಆಟವಾಡಿಸುತ್ತಿದ್ದೆವು. ಕೆಲ ನನ್ನ ಗೆಳೆಯರು ತುಂಡು ಬೀಡಿಗಳನ್ನು ಆರಿಸಿ ತಂದು ಅದನ್ನು ಸೇದುವಂತೆ ಓತಿಕ್ಯಾತವನ್ನು ಪುಸಲಾಯಿಸುತ್ತಿದ್ದರು. ಬೆಂಕಿ ಮೂಡಿದ ಬೀಡಿಯ ಹೊಗೆ ಎಳೆದುಕೊಂಡ ಓತಿಕ್ಯಾತ ತಲೆಸುತ್ತು ಬಂದು ಯರ್‍ರಾಬಿರ್‍ರಿಯಾಗಿ ಕ್ಯಾಬರೆ ನೃತ್ಯ ಮಾಡುತ್ತಿತ್ತು. ಇನ್ಯಾವುದೇ ಮನರಂಜನಾ ಸಾಧನಗಳಿಲ್ಲದ ಆ ಬಡತನದ ದಿನಗಳಲ್ಲಿ ನಾವೇ ಕಂಡುಕೊಂಡ ಆಟದ ಮಾದರಿಗಳ ಪೈಕಿ ಇದೂ ಒಂದಾಗಿತ್ತು.

ನಾಯಿಯೊಂದು ಆಟವಾಡುತ್ತಿದ್ದ ನಮ್ಮ ಗೆಳೆಯ ಜಾವೀದನಿಗೆ ಚಕ್ಕಂತ ಓಡಿ ಬಂದು ಕಚ್ಚಿ ಹೋಯಿತು. ಯಾವುದೇ ಪ್ರಚೋದನೆಯಿಲ್ಲದೆ ತಾನೇ ಸ್ವಯಂ ಸ್ಫೂರ್ತಿಯಿಂದ ಹೀಗೆ ಬಂದು ಕಚ್ಚಿ ಹೋದದ್ದು ಯಾಕೆಂದು ನಮಗೂ ತಿಳಿಯಲಿಲ್ಲ. ಕಚ್ಚಿಸಿಕೊಂಡ ಗೆಳೆಯನ ಕಾಲಿನಲ್ಲಿ ಅದರ ಹಲ್ಲುಗಳು ಮೂಡಿ ರಕ್ತ ಸುರಿಯತೊಡಗಿತ್ತು. ಹಳ್ಳಿ ವೈದ್ಯವನ್ನು ಒಂದಿಷ್ಟು ಅರಿತ ನಾನು ಸುರಿಯುತ್ತಿದ್ದ ರಕ್ತ ನಿಲ್ಲಿಸಲು ಲಂಟಾನದ ಎಲೆ ಕಿತ್ತು ತಂದು ಅದರ ರಸ ಸುರಿದೆ. ಮೊದಲೇ ನೋವಿನಿಂದ ಕೊಸರಾಡುತ್ತಿದ್ದ ಗೆಳೆಯ ಲಂಟಾನದ ರಸ ಬಿದ್ದೊಡನೆ ಬೆಂಕಿ ತಗುಲಿದವನಂತೆ ಲಬಲಬೋ ಎಂದು ಅರಚಾಡತೊಡಗಿದ. ಅವನಿಗೆ ನಾಯಿ ಕಚ್ಚಿದ್ದಕ್ಕಿಂತ ನನ್ನ ನಾಟಿ ಔಷಧವೇ ಬಹಳ ನೋವು ಮಾಡಿದಂತೆ ಕಾಣುತ್ತಿತ್ತು. ನನ್ನ ಮತ್ತೊಬ್ಬ ಗೆಳೆಯ ದೊಡ್ಡ ತಜ್ಞನಂತೆ, "ಲೇ ನಾಯಿ ಕಚ್ಚಿದರೆ ಆ ಜಾಗಕ್ಕೆ ಮಣ್ಣು ಹಚ್ಚಬೇಕು ಕಣೋ" ಎಂದು ಸಲಹೆ ಕೊಟ್ಟ. "ಆಯಿತು ಅದಕ್ಕೇನಂತೆ" ಎಂದು ಮಣ್ಣನ್ನೂ ಹಚ್ಚಿದೆ. ಮತ್ತೊಬ್ಬ "ಉಗುಳು ಹಚ್ಚೋದು ಒಳ್ಳೇದಂತ ಹೇಳ್ತಾರಪ್ಪ" ಎಂದು ಮೆಲ್ಲಗೆ ಹೇಳಿದ. ಅದನ್ನೂ ಮಾಡಿದರಾಯಿತೆಂದು ಎಲ್ಲರೂ ಬಾಯಲ್ಲಿದ್ದ ಉಗುಳೆಲ್ಲವನ್ನೂ ಮನಸಾರೆ ಅವನ ಗಾಯದ ಮೇಲೆ ತುಪ್ಪಿದೆವು. ನಮ್ಮ ಈ ವಿಚಿತ್ರ ಔಷಧೋಪಚಾರಗಳಿಂದ ದಂಗಾಗಿದ್ದ ಗೆಳೆಯ ತನ್ನ ನೋವಿನಲ್ಲೂ ಬಿಡುವು ಮಾಡಿಕೊಂಡು ನಮ್ಮ ವಿಚಿತ್ರ ವರ್ತನೆಯನ್ನೂ ಆಶ್ಚರ್ಯದಿಂದ ವೀಕ್ಷಿಸುತ್ತಿದ್ದ.

ಆಗ ಮನ್ಸೂರ್ ಎಂಬಾತ, "ರೇ ಇಸ್ಕಿಮಾಕಿ ಇವನ್ಗೆ ಕಚ್ಚಿರೋದು ದಿವಾನ ಕುತ್ತಾ ಆದ್ರೆ ಹೊಟ್ಟೆ ಸುತ್ತಾ ಹದ್ನಾಕು ಸುವ್ವೇಕ ಸರ್ಕೆ ಚೂಜೀಲಿ ಇಂಜೆಕ್ಷನ್ ಕೊಡ್ಬೇಕು ಕಂಡ್ರೋ. ಅದು ಭಾಳ ನೋವಂತೆ. ಹೊಟ್ಟೆ ಒಳ್ಗಿರೋ ಕಳ್ಳುಪಚ್ಚಿ ತಂಕ ಚೂಜಿ ಹೆಟ್ತಾರಂತೆ" ಎಂದು ತಾನೇ ಎಲ್ಲಾ ನೋಡಿ ಅನುಭವಿಸಿದವನಂತೆ ಮುಖ ಕಿವಿಚಿಕೊಂಡು ಹೇಳಿದ. ದಬಳದಂತ ಸೂಜಿಯನ್ನು ಕರುಳುಗಳ ತನಕ ಚುಚ್ಚುವುದು ಕೇಳಿ ಗಾಬರಿಗೊಂಡ ಜಾವೀದ ಮತ್ತಷ್ಟೂ ಘನಘೋರವಾಗಿ ಅಳತೊಡಗಿದ. ಅಷ್ಟಕ್ಕೆ ಸುಮ್ಮನಾಗದ ಮನ್ಸೂರ್, "ಇಸ್ಕೆಬಾದ್ ಜಾವೀದ್